**KABI700004542021**

# ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ.

ಉಪಸ್ಥಿತರುಃ ಅಶೋಕ ಆರ್. ಎಚ್.,
ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸಿರುಗುಪ್ಪ.

ದಿನಾಂಕಃ 24 ನೇ ಜೂಲೈ -2026 ರಂದು ಉಚ್ಚರಿಸಲ್ಪಟ್ಟಿತು

**ಅಪರಾಧಿಕ ಪ್ರಕರಣ ಸಂಖ್ಯೆ 561/2021**

ಪಿರ್ಯಾದಿದಾರರುಃ ಕರ್ನಾಟಕ ಸರ್ಕಾರ
ಆರಕ್ಷಕ ಉಪ ನಿರೀಕ್ಷಕರು, ಸಿರಿಗೇರಿ ಪೊಲೀಸ್ ಠಾಣೆ,
ಸಿರುಗುಪ್ಪ ತಾಃ ಬಳ್ಳಾರಿ ಜಿಲ್ಲೆ.

(ಸಹಾಯಕ ಸರ್ಕಾರಿ ಅಭಿಯೋಜಕರು)

ವಿರುದ್ಧ

ಆರೋಪಿತರುಃ

ಎ1) ಗರ್ಜೆಪ್ಪ ಬಿನ್ ಕೊಳ್ಳಿ ರಾಮಲಿಂಗಪ್ಪ, ವಃ 22 ವರ್ಷ,

ಎ2) ರಾಮಲಿಂಗಪ್ಪ ಕೊಳ್ಳಿ ಬಿನ್ ಈರಪ್ಪ ಕೊಳ್ಳಿ, ವಃ 50 ವರ್ಷ,
(ಮೃತಪಟ್ಟಿರುತ್ತಾರೆ)

ಎ3) ಹಂಪಮ್ಮ ಬಿನ್ ರಾಮಲಿಂಗಪ್ಪ, ವಃ 45 ವರ್ಷ,

ಎ4) ಬಸವ, ವಃ 35 ವರ್ಷ,

ಎ5) ಮೂರ್ತಿ ಬಿನ್ ಪಾಪಣ್ಣ, ವಃ 26 ವರ್ಷ,

ಎ6) ಶರಣ ಬಿನ್ ಯಂಕಪ್ಪ, ವಃ 22 ವರ್ಷ,

ಎಲ್ಲರ ವಾಸಃ ನಡವಿ ಗ್ರಾಮ, ಸಿರುಗುಪ್ಪ ತಾಃ ಬಳ್ಳಾರಿ ಜಿಃ

(ಆರೋಪಿತರ ಪರವಾಗಿ ಶ್ರೀ ಎಸ್.ಹೆಚ್., ವಕೀಲರು)

| | | |
|---|---|---|
| 1 | ಅಪರಾಧ ನಡೆದ ದಿನಾಂಕ | 05.03-2021 |
| 2 | ಅಪರಾಧ ವರದಿಯಾದ ದಿನಾಂಕ | 05.03-2021 |
| 3 | ಫಿರ್ಯಾದಿಯ ಹೆಸರು | ನಾಗಮ್ಮ |

| | | |
|---|---|---|
| 4 | ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 07-04-2026 |
| 5 | ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | 20-07-2026 |
| 6 | ಆರೋಪಿಸಲಾದ ಅಪರಾಧಗಳು | ಭಾ.ದಂ.ಸಂ.ಕಲಂ.143, 147, 323, 324, 504, 506(2) ಸಹವಾಚಕ 149 |
| | ನ್ಯಾಯಾಧೀಶರ ಅಭಿಪ್ರಾಯ | ಆರೋಪಿತರು ನಿರ್ದೋಷಿತರು. |

(ಅಶೋಕ ಆರ್. ಎಚ್.)
ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ.ಸಿರುಗುಪ್ಪ.

**ತೀರ್ಪು**

ಠಾಣಾಧಿಕಾರಿಗಳು, ಸಿರಿಗೇರಿ ಪೋಲಿಸ್ ಠಾಣೆಯವರು ಆರೋಪಿತರ ವಿರುದ್ಧ ಭಾ.ದಂ.ಸಂ.ಕಲಂ.143, 147, 323, 324, 504, 506(2) ಸಹವಾಚಕ 149 ರ ಅಡಿಯಲ್ಲಿ ಅಪರಾಧ ಎಸಗಿದ್ದಾರೆಂದು ಆರೋಪಿಸಿ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದಾರೆ.

2) ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆಃ

ದಿನಾಂಕಃ **05-03-2021** ರಂದು ಮದ್ಯಾಹ್ನ **3.00** ಗಂಟೆ ಸುಮಾರಿಗೆ ಸಿರಿಗೇರಿ ಪೊಲೀಸ್ ಠಾಣಾ ಸರಹದ್ದು ಚಾಸಾ-1 ರವರು ಹೋಗುವ ದಾರಿಯಲ್ಲಿ ಚಾಸಾ-4 ರವರು ತನ್ನ ಮೋಟಾರ್ ಸೈಕಲ್ ನಲ್ಲಿ ಮನೆಗೆ ಚಲಾಯಿಸಿಕೊಂಡು 2 ನೇ ಆರೋಪಿಯ ಮನೆಯ ಪಕ್ಕದ ದಾರಿಯಲ್ಲಿ ಹೋಗುವಾಗ 1 ನೇ ಆರೋಪಿಯು ಮಣ್ಣಿನ ಗರಸನ್ನು ಎತ್ತರವಾಗಿ ದಾರಿಯಲ್ಲಿ ಗಾಡಿಗಳು ಓಡಾಡದಂತೆ ಹಾಕಿದ್ದು, ಅದನ್ನು ಕಂಡು ಚಾಸಾ-4 ರವರು 1 ನೇ ಆರೋಪಿಗೆ ದಾರಿಯಲ್ಲಿ ನೋಡಿ ಮಣ್ಣು ಹಾಕ್ರಪ್ಪ ದಾರಿಯಲ್ಲಿ ಓಡಾಡುವುದು ಹೆಂಗಪ್ಪ ಎಂದಿದ್ದಕ್ಕೆ 1 ನೇ ಆರೋಪಿಯು ಲೇ ಸೂಳೇ ಮಗನೆ ನೀನು ಯಾವನಲೇ ಕೇಳೋಕೆ ಎಂದು ಆರೋಪಿತರು ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಅಕ್ರಮ ಕೂಟದ ಸದಸ್ಯರಾಗಿ ಚಾಸಾ 1 ರವರೊಂದಿಗೆ ಜಗಳ ತೆಗೆದು ದೊಂಬಿ ಮಾಡಿದ್ದು, ಜಗಳವನ್ನು ಬಿಡಿಸಲು ಬಂದ

ಚಾಸಾ-1 ರವರಿಗೆ 3 ಮತ್ತು 4 ನೇ ಆರೋಪಿತರು ಸುತ್ತುವರೆದು ಕೂದಲು ಹಿಡಿದು ಎಳೆದಾಡಿ ಕೈಗಳಿಂದ ಕಪಾಳಕ್ಕೆಹೊಡೆದು, ಕೈಯಿಂದ ನೂಕಿದ್ದರಿಂದ ಚಾಸಾ-1 ರವರು ಗೋಡೆಗೆ ಬಿದ್ದಾಗ ಆಕೆಯ ಬಲ ಮೊಣಕೈಗೆ ಸಾದಾರಣ ಸ್ವರೂಪದ ತೆರೆಚಿದ ಗಾಯಮಾಡಿದ್ದಲ್ಲದೆ, ಜಗಳವನ್ನು ಬಿಡಿಸಲು ಬಂದ ಚಾಸಾ-5 ಮತ್ತು 6 ರವರಿಗೆ 5 ಮತ್ತು 6 ರವರಿಗೆ ಸುತ್ತುವರೆದು ಈ ಸೂಳೇಯವರನ್ನು ಒದಿರ್ರಲೇ ಎಂದು ಬೈಯುತ್ತಾ ಕೈಗಳಿಂದ ಚಾಸಾ-5 ರವರ ಮುಖಕ್ಕೆ ಮುಖಕ್ಕೆ ಗುದ್ದಿದ್ದಲ್ಲದೆ, 6 ನೇ ಆರೋಪಿಯು ಚಾಸಾ-6 ರವರ ಹೊಟ್ಟೆಗೆ ಒದ್ದಿದ್ದು, 1 ನೇ ಆರೋಪಿಯು ಚಾಸಾ-4 ರವರನ್ನು ಹಿಡಿದು ದಾರಿಗೆ ಎಳೆದುಕೊಂಡು ಹೋಗಿ ತನ್ನ ಕೈಯಲ್ಲಿದ್ದ ಕಟ್ಟಿಗೆಯಿಂದ ಚಾಸಾ-4 ರವರ ಬೆನ್ನಿಗೆ ಹೊಡೆದು ಸಾದಾರಣ ಸ್ವರೂಪದ ಪೆಟ್ಟು ಮಾಡಿದ್ದು, 2 ನೇ ಆರೋಪಿಯು ಚಾಸಾ-4 ರವರಿಗೆ ಲೇ ಸೂಳೇ ಮಗನೇ ನೀವು ಎಷ್ಟು ಜನ ಇದ್ದೀರಿ ಬರ್ರಲೇ ಸೂಳೇ ಮಕ್ಕಳೇ ಎಂದು ಅವಾಚ್ಯ ಶಬ್ದಗಳಿಂದ ಬೈದಾಡಿದ್ದಲ್ಲದೆ, ಕೈಗಳಲ್ಲಿ ಕಟ್ಟಿಗೆಗಳನ್ನು ಹಿಡಿದುಕೊಂಡು ಗಾಯಾಳುಗಳಿಗೆ ಇವತ್ತು ನೀವು ಬದುಕಿಬಿಟ್ಟಿದ್ದೀರಿ ನಿಮ್ಮನ್ನು ಇಲ್ಲಿಗೆ ಬಿಡುವುದಿಲ್ಲಲೇ ಮುಗಿಸುತ್ತೇವೆಂದು ಪ್ರಾಣಬೆದರಿಕೆ ಹಾಕಿರುತ್ತಾರೆ ಎಂದು ಪಿರ್ಯಾದಿ ಸಲ್ಲಿಸಿದ್ದು ಇರುತ್ತದೆ. ಸದರಿ ಪಿರ್ಯಾದಿಯ ಮೇಲೆ ಪ್ರಕರಣ ದಾಖಲಿಸಿ, ತನಿಖೆಯ ನಂತರ ತನಿಖಾಧಿಕಾರಿಗಳು ಭಾ.ದಂ.ಸಂ.ಕಲಂ.143, 147, 323, 324, 504, 506 (2) ಸಹವಾಚಕ 149 ರ ಅಡಿಯಲ್ಲಿ ಆರೋಪಿತರು ಅಪರಾಧ ಎಸಗಿದ್ದಾರೆಂದು ದೋಷಾರೋಪಣೆ ಪತ್ರ ಸಲ್ಲಿಸಿರುತ್ತಾರೆ

3) ದೋಷಾರೋಪಣಾ ಪಟ್ಟಿ ಸಲ್ಲಿಸಿದ ನಂತರ ಅದನ್ನು ಪರಿಶೀಲಿಸಿ ಅಪರಾಧದ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿತರ ವಿರುದ್ಧ ಪ್ರಕರಣ ದಾಖಲಿಸಿ, ಸಮನ್ಸ್ ನೀಡಲಾಗಿರುತ್ತದೆ. ಆರೋಪಿತರು ನ್ಯಾಯಾಲಯದಿಂದ ಹೊರಡಿಸಿದ ಸಮನ್ಸ್ ಗೆ ಉತ್ತರವಾಗಿ ನ್ಯಾಯಾಲಯದ ಮುಂದೆ ಬಂದು ಹಾಜರಾಗಿ ಜಾಮೀನು ಪಡೆದಿರುತ್ತಾರೆ. ನಂತರ ಆರೋಪಿತರಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರಲ್ಲಿ ತಿಳಿಸಿರುವಂತೆ ದೋಷಾರೋಪಣೆ ಪತ್ರದ ನಕಲುಗಳನ್ನು ಪೂರೈಸಲಾಗಿರುತ್ತದೆ.

4) ನಂತರ ಆರೋಪಿತರ ಪರ ಹಾಗೂ ಅಭಿಯೋಜನೆಯವರ ವಾದವನ್ನು ಕೇಳಿ ಆರೋಪಿತರ ವಿರುದ್ಧ ದೋಷಾರೋಪಣೆ ರಚಿಸಿ, ಆರೋಪಿತರಿಗೆ ತಿಳಿಯುವ

ಭಾಷೆಯಲ್ಲಿ ಓದಿ ಹೇಳಿದಾಗ, ಅದನ್ನು ತಿಳಿದುಕೊಂಡು ಆರೋಪಿತರು ತಾವು ಅಪರಾಧ ಮಾಡಿಲ್ಲಾ ವಿಚಾರಣೆಯಾಗಬೇಕು ಎಂದು ಕೇಳಿಕೊಂಡಿರುತ್ತಾರೆ.

5). ಆರೋಪಿತರ ವಿರುದ್ಧದ ಆರೋಪವನ್ನು ರುಜುವಾತುಪಡಿಸುವ ಸಲುವಾಗಿ ಅಭಿಯೋಜನೆಯವರು ತಮ್ಮ ಪರವಾಗಿ ದೋಷಾರೋಪಣ ಪತ್ರದಲ್ಲಿ ಒಟ್ಟು 10 ಜನ ಸಾಕ್ಷಿದಾರರನ್ನು ತೋರಿಸಲಾಗಿದ್ದು, ಅವರುಗಳಲ್ಲಿ ಮೂರು ಜನ ಸಾಕ್ಷಿದಾರರನ್ನು ಫ್ರಾ.ಸಾ.1 ರಿಂದ 4 ಎಂದು ವಿಚಾರಣೆ ಮಾಡಿ, ನಿ.ಪಿ.1 ರಿಂದ 7 ರವರೆಗೆ ದಾಖಲೆಗಳನ್ನು ನಿಶಾನಿಸಿಕೊಂಡಿರುತ್ತಾರೆ. ಫ್ರಾಸಾ-1 ರವರು ದೂರುದಾರರಾಗಿದ್ದು, ತಮ್ಮ ಪ್ರಕರಣಕ್ಕೆ ವಿರುದ್ದವಾಗಿ ಸಾಕ್ಷಿ ನುಡಿದು ಆರೋಪಿತರ ಕೃತ್ಯವನ್ನು ಅಲ್ಲಗಳೆದಿರುತ್ತಾರೆ. ಉಳಿದ ಸಾಕ್ಷಿದಾರರು ಸಹ ಅಭಿಯೋಜನೆಯ ಪ್ರಕರಣಕ್ಕೆ ವಿರುದ್ದವಾಗಿ ಸಾಕ್ಷಿ ನುಡಿದು ಆರೋಪಿತರ ಕೃತ್ಯವನ್ನು ಅಲ್ಲಗಳೆದಿರುತ್ತಾರೆ. ಆದ್ದರಿಂದ ಇತರೆ ದೋಷಾರೋಪಣೆ ಪತ್ರದ ಸಾಕ್ಷ್ಯಗಳಿಗೆ ಸಮನ್ಸ್ ನೀಡುವಂತೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಮಾಡಿದ ಮನವಿಯನ್ನು ತಿರಸ್ಕರಿಸಲಾಗಿರುತ್ತದೆ. ಅಭಿಯೋಜನೆ ಪರ ಸಾಕ್ಷಿ ವಿಚಾರಣೆ ಮುಗಿದ ನಂತರ ಆರೋಪಿತರ ಮೇಲೆ ಯಾವುದೇ ಸಾಕ್ಷಾಧಾರಗಳು ಕಂಡು ಬಾರದ ಕಾರಣ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313 ರಡಿಯಲ್ಲಿ ಪಡೆಯಬೇಕಾದ ಆರೋಪಿತರ ಹೇಳಿಕೆಯನ್ನು ವಿನಾಯತಿಗೊಳಿಸಲಾಗಿರುತ್ತದೆ.

6) ಅಪರಾಧಿಕ ದಂಡ ಪ್ರಕ್ರೀಯಾ ಸಂಹಿತೆ ಕಲಂ 437(ಎ) ರಡಿಯಲ್ಲಿ ಆರೋಪಿತರಿಂದ ಜಾಮೀನು ತೆಗೆದುಕೊಳ್ಳಲಾಗಿರುತ್ತದೆ.

7) ಆರೋಪಿತರ ಹಾಗೂ ಅಭಿಯೋಜನೆ ಪರ ವಾದವನ್ನು ಕೇಳಲಾಯಿತು. ನ್ಯಾಯಾಲಯದ ಮುಂದೆ ಇರುವ ಕಡತ ಪರಿಶೀಲಿಸಲಾಯಿತು.

8) ಈಗ ನ್ಯಾಯಾಲಯವು ನಿರ್ಧರಿಸಲ್ಪಡುವ ಅಂಶಗಳೆಂದರೆ,

<u>ಅಂಶಗಳು</u>

1) ದಿನಾಂಕಃ 05-03-2021 ರಂದು ಮದ್ಯಾಹ್ನ 3.00 ಗಂಟೆ ಸುಮಾರಿಗೆ ಸಿರಿಗೇರಿ ಪೊಲೀಸ್ ಠಾಣಾ ಸರಹದ್ದು ಚಾಸಾ-1 ರವರು ಹೋಗುವ ದಾರಿಯಲ್ಲಿ ಚಾಸಾ-4 ರವರು ತನ್ನ ಮೋಟಾರ್ ಸೈಕಲ್

ನಲ್ಲಿ ಮನೆಗೆ ಚಲಾಯಿಸಿಕೊಂಡು 2 ನೇ ಆರೋಪಿಯ ಮನೆಯ ಪಕ್ಕದ ದಾರಿಯಲ್ಲಿ ಹೋಗುವಾಗ 1 ನೇ ಆರೋಪಿಯು ಮಣ್ಣಿನ ಗರಸನ್ನು ಎತ್ತರವಾಗಿ ದಾರಿಯಲ್ಲಿ ಗಾಡಿಗಳು ಓಡಾಡದಂತೆ ಹಾಕಿದ್ದು, ಅದನ್ನು ಕಂಡು ಚಾಸಾ-4 ರವರು 1 ನೇ ಆರೋಪಿಗೆ ದಾರಿಯಲ್ಲಿ ನೋಡಿ ಮಣ್ಣು ಹಾಕ್ರಪ್ಪ ದಾರಿಯಲ್ಲಿ ಓಡಾಡುವುದು ಹೆಂಗಪ್ಪ ಎಂದಿದ್ದಕ್ಕೆ 1 ನೇ ಆರೋಪಿಯು ಲೇ ಸೂಳೇ ಮಗನೆ ನೀನು ಯಾವನಲೇ ಕೇಳೋಕೆ ಎಂದು ಆರೋಪಿತರು ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಅಕ್ರಮ ಕೂಟದ ಸದಸ್ಯರಾಗಿ ಚಾಸ-1 ರವರೊಂದಿಗೆ ಜಗಳ ತೆಗೆದು, ಆ ಮೂಲಕ ಭಾ.ದಂ.ಸಂ.ಕಲಂ.143 ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಮಾಡಿದ್ದಾರೆಂದು ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸಿರುತ್ತಾ ರೆಯೇ?

2) ಅಭಿಯೋಜನಾ ಪಕ್ಷದವರು, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಏಕೋದ್ದೇಶದಿಂದ ಅಕ್ರಮಕೂಟ ರಚಿಸಿ ದೊಂಬಿ ಮಾಡಿದ್ದು, ಆ ಮೂಲಕ ಆರೋಪಿಯು ಭಾ. ದಂ. ಸಂ. ಕಲಂ. 147 ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಮಾಡಿದ್ದಾರೆಂದು ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸಿರುತ್ತಾ ರೆಯೇ?

3) ಅಭಿಯೋಜನಾ ಪಕ್ಷದವರು, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಏಕೋದ್ದೇಶದಿಂದ 1 ನೇ ಆರೋಪಿಯು ಚಾಸಾ-4 ರವರನ್ನು ಹಿಡಿದು ದಾರಿಗೆ ಎಳೆದು ಕೊಂಡು ಹೋಗಿ ತನ್ನ ಕೈಯಲ್ಲಿದ್ದ ಕಟ್ಟಿಗೆಯಿಂದ ಚಾಸಾ-4 ರವರ ಬೆನ್ನಿಗೆ ಹೊಡೆದು ಸಾದಾರಣ ಸ್ವರೂಪದ ಪೆಟ್ಟು ಮಾಡಿದ್ದು, ಆ ಮೂಲಕ ಆರೋಪಿತರು ಭಾ. ದಂ. ಸಂ. ಕಲಂ. 324 ಸಹವಾಚಕ 149 ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಮಾಡಿದ್ದಾರೆಂದು ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತು ಪಡಿಸಿರುತ್ತಾರೆಯೇ?

4) ಅಭಿಯೋಜನಾ ಪಕ್ಷದವರು, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಏಕೋದ್ದೇದಿಂದ ಜಗಳವನ್ನು ಬಿಡಿಸಲು ಬಂದ ಚಾಸಾ-1 ರವರಿಗೆ ನಿಮ್ಮ ಪೈಕಿ 3 ಮತ್ತು 4 ನೇ ಆರೋಪಿತರು ಸುತ್ತುವರೆದು ಕೂದಲು ಹಿಡಿದು ಎಳೆದಾಡಿ ಕೈಗಳಿಂದ ಕಪಾಳಕ್ಕೆಹೊಡೆದು, ಕೈಯಿಂದ ನೂಕಿದ್ದರಿಂದ ಚಾಸಾ-1 ರವರು ಗೋಡೆಗೆ ಬಿದ್ದಾಗ ಆಕೆಯ ಬಲ ಮೊಣಕೈಗೆ ಸಾದಾರಣ ಸ್ವರೂಪದ ತೆರೆಚಿದ ಗಾಯಮಾಡಿದ್ದಲ್ಲದೆ, ಜಗಳವನ್ನು ಬಿಡಿಸಲು ಬಂದ ಚಾಸಾ-5 ಮತ್ತು 6 ರವರಿಗೆ 5 ಮತ್ತು 6 ರವರಿಗೆ ಸುತ್ತುವರೆದು ಈ ಸೂಳೇಯವರನ್ನು ಒದಿರ್ರಲೇ ಎಂದು ಬೈಯುತ್ತಾ ಕೈಗಳಿಂದ ಚಾಸಾ-5 ರವರ ಮುಖಕ್ಕೆ ಮುಖಕ್ಕೆ ಗುದ್ದಿದ್ದಲ್ಲದೆ, 6 ನೇ ಆರೋಪಿಯು ಚಾಸಾ-6 ರವರ ಹೊಟ್ಟೆಗೆ ಒದ್ದಿದ್ದು, ಆ ಮೂಲಕ ಆರೋಪಿತರು ಭಾ. ದಂ. ಸಂ. ಕಲಂ. 323 ಸಹವಾಚಕ 149 ರ

ಅಡಿಯಲ್ಲಿ ದಂಡನೀಯ ಅಪರಾಧವನ್ನು ಮಾಡಿದ್ದಾರೆಂದು ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತು ಪಡಿಸಿರುತ್ತಾರೆಯೇ?

5) ಅಭಿಯೋಜನಾ ಪಕ್ಷದವರು, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಏಕೋದ್ದೇಶದಿಂದ 2 ನೇ ಆರೋಪಿಯು ಚಾಸಾ-4 ರವರಿಗೆ ಲೇ ಸೂಳೇ ಮಗನೇ ನೀವು ಎಷ್ಟು ಜನ ಇದ್ದೀರಿ ಬರ್ರಲೇ ಸೂಳೇ ಮಕ್ಕಳೇ ಎಂದು ಅವಾಚ್ಯ ಶಬ್ದಗಳಿಂದ ಅವಹೇಳನಕಾಗಿಯಾಗಿ ಬೈದು, ಆ ಮೂಲಕ ಆರೋಪಿತರು ಭಾ. ದಂ. ಸಂ. ಕಲಂ. 504 ಸಹವಾಚಕ 149 ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಮಾಡಿದ್ದಾರೆಂದು ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತು ಪಡಿಸಿರುತ್ತಾರೆಯೇ?

6) ಅಭಿಯೋಜನಾ ಪಕ್ಷದವರು, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಕೈಗಳಲ್ಲಿ ಕಟ್ಟಿಗೆಗಳನ್ನು ಹಿಡಿದು ಕೊಂಡು ಗಾಯಾಳುಗಳಿಗೆ ಇವತ್ತು ನೀವು ಬದುಕಿಬಿಟ್ಟಿದ್ದೀರಿ ನಿಮ್ಮನ್ನು ಇಲ್ಲಿಗೆ ಬಿಡುವುದಿಲ್ಲಲೇ ಮುಗಿಸುತ್ತೇವೆಂದು ಪ್ರಾಣಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿತರು ಭಾ. ದಂ. ಸಂ. ಕಲಂ.506(2) ಸಹವಾಚಕ 149 ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಮಾಡಿದ್ದಾರೆಂದು ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತು ಪಡಿಸಿರುತ್ತಾರೆಯೇ?

7) ಯಾವ ಆದೇಶ / ಶಿಕ್ಷೆ ಏನು?

**9)** ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿದೆ.

ಅಂಶ ಸಂಖ್ಯೆ-1 : ನಕಾರಾತ್ಮಕವಾಗಿ

ಅಂಶ ಸಂಖ್ಯೆ-2 : ನಕಾರಾತ್ಮಕವಾಗಿ

ಅಂಶ ಸಂಖ್ಯೆ-3 : ನಕಾರಾತ್ಮಕವಾಗಿ

ಅಂಶ ಸಂಖ್ಯೆ-4 : ನಕಾರಾತ್ಮಕವಾಗಿ

ಅಂಶ ಸಂಖ್ಯೆ-5 : ನಕಾರಾತ್ಮಕವಾಗಿ

ಅಂಶ ಸಂಖ್ಯೆ-6 : ನಕಾರಾತ್ಮಕವಾಗಿ

ಅಂಶ ಸಂಖ್ಯೆ-7 : ಅಂತಿಮ ಆದೇಶದಂತೆ ಈ ಕೆಳಗೆ ಚರ್ಚಿಸಿದ ಕಾರಣಗಳಿಗಾಗಿ;

ಕಾರಣಗಳು

10) **<u>ಅಂಶ ಸಂಖ್ಯೆ-1 ರಿಂದ 6:-</u>** ಈ ಎಲ್ಲಾ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಇವೆಲ್ಲವನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳುತ್ತಿದ್ದೇನೆ.

ಅಭಿಯೋಜನೆಯ ಪ್ರಕಾರ, ದಿನಾಂಕ 05-03-2021 ರಂದು ಮಧ್ಯಾಹ್ನ 3.00 ಗಂಟೆ ಸುಮಾರಿಗೆ ಸಿರಿಗೇರಿ ಪೊಲೀಸ್ ಠಾಣಾ ಸರಹದ್ದು ಚಾಸಾ-1 ರವರು ಹೋಗುವ ದಾರಿಯಲ್ಲಿ ಚಾಸಾ-4 ರವರು ತನ್ನ ಮೋಟಾರ್ ಸೈಕಲ್ ನಲ್ಲಿ ಮನೆಗೆ ಚಲಾಯಿಸಿಕೊಂಡು 2 ನೇ ಆರೋಪಿಯ ಮನೆಯ ಪಕ್ಕದ ದಾರಿಯಲ್ಲಿ ಹೋಗುವಾಗ 1 ನೇ ಆರೋಪಿಯು ಮಣ್ಣಿನ ಗರಸನ್ನು ಎತ್ತರವಾಗಿ ದಾರಿಯಲ್ಲಿ ಗಾಡಿಗಳು ಓಡಾಡದಂತೆ ಹಾಕಿದ್ದು, ಅದನ್ನು ಕಂಡು ಚಾಸಾ-4 ರವರು 1 ನೇ ಆರೋಪಿಗೆ ದಾರಿಯಲ್ಲಿ ನೋಡಿ ಮಣ್ಣು ಹಾಕ್ರಪ್ಪ ದಾರಿಯಲ್ಲಿ ಓಡಾಡುವುದು ಹೆಂಗಪ್ಪ ಎಂದಿದ್ದಕ್ಕೆ 1 ನೇ ಆರೋಪಿಯು ಲೇ ಸೂಳೇ ಮಗನೆ ನೀನು ಯಾವನಲೇ ಕೇಳೋಕೆ ಎಂದು ಆರೋಪಿತರು ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಅಕ್ರಮ ಕೂಟದ ಸದಸ್ಯರಾಗಿ ಚಾಸಾ-1 ರವರೊಂದಿಗೆ ಜಗಳ ತೆಗೆದು ದೊಂಬಿ ಮಾಡಿದ್ದು, ಜಗಳವನ್ನು ಬಿಡಿಸಲು ಬಂದ ಚಾಸಾ-1 ರವರಿಗೆ 3 ಮತ್ತು 4 ನೇ ಆರೋಪಿತರು ಸುತ್ತುವರೆದು ಕೂದಲು ಹಿಡಿದು ಎಳೆದಾಡಿ ಕೈಗಳಿಂದ ಕಪಾಳಕ್ಕೆಹೊಡೆದು, ಕೈಯಿಂದ ನೂಕಿದ್ದರಿಂದ ಚಾಸಾ-1 ರವರು ಗೋಡೆಗೆ ಬಿದ್ದಾಗ ಆಕೆಯ ಬಲ ಮೊಣಕೈಗೆ ಸಾದಾರಣ ಸ್ವರೂಪದ ತೆರೆಚಿದ ಗಾಯಮಾಡಿದ್ದಲ್ಲದೆ, ಜಗಳವನ್ನು ಬಿಡಿಸಲು ಬಂದ ಚಾಸಾ-5 ಮತ್ತು 6 ರವರಿಗೆ 5 ಮತ್ತು 6 ರವರಿಗೆ ಸುತ್ತುವರೆದು ಈ ಸೂಳೇಯವರನ್ನು ಒದಿರ್ರಲೇ ಎಂದು ಬೈಯುತ್ತಾ ಕೈಗಳಿಂದ ಚಾಸಾ-5 ರವರ ಮುಖಕ್ಕೆ ಮುಖಕ್ಕೆ ಗುದ್ದಿದ್ದಲ್ಲದೆ, 6 ನೇ ಆರೋಪಿಯು ಚಾಸಾ-6 ರವರ ಹೊಟ್ಟೆಗೆ ಒದ್ದಿದ್ದು, 1 ನೇ ಆರೋಪಿಯು ಚಾಸಾ-4 ರವರನ್ನು ಹಿಡಿದು ದಾರಿಗೆ ಎಳೆದುಕೊಂಡು ಹೋಗಿ ತನ್ನ ಕೈಯಲ್ಲಿದ್ದ ಕಟ್ಟಿಗೆಯಿಂದ ಚಾಸಾ-4 ರವರ ಬೆನ್ನಿಗೆ ಹೊಡೆದು ಸಾದಾರಣ ಸ್ವರೂಪದ ಪೆಟ್ಟು ಮಾಡಿದ್ದು, 2 ನೇ ಆರೋಪಿಯು ಚಾಸಾ-4 ರವರಿಗೆ ಲೇ ಸೂಳೇ ಮಗನೇ ನೀವು ಎಷ್ಟು ಜನ ಇದ್ದೀರಿ ಬರ್ರಲೇ ಸೂಳೇ ಮಕ್ಕಳೇ ಎಂದು ಅವಾಚ್ಯ ಶಬ್ದಗಳಿಂದ ಬೈದಾಡಿದ್ದಲ್ಲದೆ, ಕೈಗಳಲ್ಲಿ ಕಟ್ಟಿಗೆಗಳನ್ನು ಹಿಡಿದುಕೊಂಡು ಗಾಯಾಳುಗಳಿಗೆ ಇವತ್ತು ನೀವು ಬದುಕಿಬಿಟ್ಟಿದ್ದೀರಿ ನಿಮ್ಮನ್ನು ಇಲ್ಲಿಗೆ ಬಿಡುವುದಿಲ್ಲಲೇ ಮುಗಿಸುತ್ತೇವೆಂದು ಪ್ರಾಣಬೆದರಿಕೆ ಹಾಕಿರುತ್ತಾರೆ ಎಂಬುದಾಗಿರುತ್ತದೆ.

11) ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಅಭಿಯೋಜನೆಯವರು ಆರೋಪಿತರ ಮೇಲಿನ ಆಪಾದನೆಯನ್ನು ಸಾಭೀತುಪಡಿಸಲು, ಪಿರ್ಯಾದಿ ಸಾಕ್ಷಿಯನ್ನು ಚಾಸಾ-1/ಪ್ರಾಸಾ-1 ಎಂತಲೂ, ಗಾಯಾಳುವನ್ನು ಚಾಸಾ-4/ಪ್ರಾಸಾ-2, ಪ್ರತ್ಯಕ್ಷ ಸಾಕ್ಷಿದಾರರನ್ನು ಚಾಸಾ-5/ಪ್ರಾಸಾ-3 ಹಾಗೂ ಚಾಸಾ-6/ಪ್ರಾಸಾ-4 ಎಂತಲೂ ವಿಚಾರಣೆಗೆ ಒಳಪಡಿಸಿರುತ್ತಾರೆ.

12) ಈ ಪ್ರಕರಣದ ಚಾಸಾ-1/ಪ್ರಾಸಾ-1 ಪಿರ್ಯಾದಿ ಇದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-4 ರವರು ತನ್ನ ಗಂಡನಿದ್ದು, ಚಾಸಾ-5 ರಿಂದ 8 ರವರು ತನಗೆ ಗೊತ್ತು. ಆರೋಪಿತರು ತನಗೆ ಗೊತ್ತು, ತಮ್ಮ ಹಾಗೂ ಆರೋಪಿತರ ನಡುವೆ ಬಾಯಿ ಮಾತಿನ ಜಗಳವಾಗಿದ್ದು, ಆ ಬಗ್ಗೆ ತಾನು ಪೊಲೀಸರಿಗೆ ಕೋರಿಕೊಂಡಾಗ ಪೊಲೀಸರು ಕೆಲವು ದಾಖಲೆಗಳ ಮೇಲೆ ಹೆಬ್ಬೆಟ್ಟಿನ ಸಹಿಯನ್ನು ಪಡೆದುಕೊಂಡಿದ್ದರು, ನಿಶಾನೆ.ಪಿ.1 ರಿಂದ 3 ರಲ್ಲಿ ಏನು ಬರೆದಿದೆ ಎಂದು ತನಗೆ ಗೊತ್ತಿರುವುದಿಲ್ಲ, ತಾನು ದೂರು ನೀಡಿಲ್ಲ ಮತ್ತು ಪೋಲಿಸರು ಪಂಚನಾಮೆಯನ್ನು ಮಾಡಿರುವುದಿಲ್ಲ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪಿರ್ಯಾದಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲಿಗೆ ಒಳಪಡಿಸಿದಾಗ್ಯೂ ಸಹ ಸಾಕ್ಷಿದಾರರು ಎಲ್ಲಾ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ. ಅವರ ಸಾಕ್ಷ್ಯದಿಂದ ಆರೋಪಿತರು ದೋಷಾರೋಪಣಾ ಪಟ್ಟಿಯಲ್ಲಿ ಹೇಳಿದಂತಹ ಅಪರಾಧ ಎಸಗಿದ್ದಾರೆ ಎಂಬ ಅಂಶ ಕಂಡು ಬಂದಿರುವುದಿಲ್ಲ.

13) ಈ ಪ್ರಕರಣದ ಪ್ರಾಸಾ-2 ರವರು ಗಾಯಾಳು ಇದ್ದು, ಅವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-1 ರವರು ತನ್ನ ಹೆಂಡತಿ ಇದ್ದು, ಚಾಸಾ-5 ರಿಂದ 8 ರವರು ಗೊತ್ತು, ಆರೋಪಿತರು ಗೊತ್ತು, ತಮ್ಮ ಹಾಗೂ ಆರೋಪಿತರ ನಡುವೆ 2021 ರಲ್ಲಿ ದಾರಿ ಸಲುವಾಗಿ ಬಾಯಿ ಮಾತಿನ ಜಗಳವಾಗಿದ್ದು, ಆರೋಪಿತರು ತನಗೆ ಹೊಡೆದು, ಅವಾಚ್ಯವಾಗಿ ಬೈದಿರುವುದಿಲ್ಲ ಹಾಗೂ ತಾನು ಪೋಲಿಸರ ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಗಾಯಾಳುವನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲಿಗೆ ಒಳಪಡಿಸಿದಾಗ್ಯೂ ಸಹ ಸಾಕ್ಷಿದಾರರು ಎಲ್ಲಾ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ. ಅವರ ಸಾಕ್ಷ್ಯದಿಂದ ಆರೋಪಿತರು ದೋಷಾರೋಪಣಾ

ಪಟ್ಟಿಯಲ್ಲಿ ಹೇಳಿದಂತಹ ಅಪರಾಧ ಎಸಗಿದ್ದಾರೆ ಎಂಬ ಅಂಶ ಕಂಡು ಬಂದಿರುವುದಿಲ್ಲ.

14) ಈ ಪ್ರಕರಣದ ಫ್ರಾಸಾ-3 ಮತ್ತು 4 ರವರು ಪ್ಪಕರಣದ ಪ್ರತ್ಯಕ್ಷ ಸಾಕ್ಷಿದಾರರಿದ್ದು, ಅವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-1, 4 ಮತ್ತು 6 ರವರು ಗೊತ್ತು, ಆರೋಪಿತರು ಗೊತ್ತು, ತಮ್ಮ ಹಾಗೂ ಆರೋಪಿತರ ನಡುವೆ 2021 ರಲ್ಲಿ ದಾರಿ ಸಲುವಾಗಿ ಬಾಯಿ ಮಾತಿನ ಜಗಳವಾಗಿದ್ದು, ಆರೋಪಿತರು ತಮಗೆ ಹೊಡೆದು, ಅವಾಚ್ಯವಾಗಿ ಬೈದಿರುವುದಿಲ್ಲ ಹಾಗೂ ತಾವು ಪೋಲಿಸರ ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತ್ಯಕ್ಷ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಗಳು ಎಂದು ಪರಿಗಣಿಸಿ, ಪಾಟೀ ಸವಾಲಿಗೆ ಒಳಪಡಿಸಿದಾಗ್ಯೂ ಸಹ ಸಾಕ್ಷಿದಾರರು ಎಲ್ಲಾ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ. ಅವರ ಸಾಕ್ಷ್ಯದಿಂದ ಆರೋಪಿತರು ದೋಷಾರೋಪಣಾ ಪಟ್ಟಿಯಲ್ಲಿ ಹೇಳಿದಂತಹ ಅಪರಾಧ ಎಸಗಿದ್ದಾರೆ ಎಂಬ ಅಂಶ ಕಂಡು ಬಂದಿರುವುದಿಲ್ಲ.

15) ನ್ಯಾಯಾಲಯದಲ್ಲಿ ಹಾಜರುಪಡಿಸಿದ ಸಾಕ್ಷಿದಾರರ ಸಾಕ್ಷ್ಯವನ್ನು ಅವಲೋಕನ ಮಾಡಿ ನೋಡಿದಾಗ ಅಭಿಯೋಜನೆಯ ಪ್ರಕರಣದ ಬಗ್ಗೆ ಬೆಳಕು ಚೆಲ್ಲಬಹುದಾಗಿದ್ದ ಅಭಿಯೋಜನಾ ಫ್ರಾಸಾ-1/ಪಿರ್ಯಾದಿ ಹಾಗೂ ಫ್ರಾಸಾ-2 ರಿಂದ 4 ರವರು ಅಭಿಯೋಜನೆಯವರ ಪ್ರಕರಣವನ್ನು ಬೆಂಬಲಿಸದಿದ್ದ ಕಾರಣ ಉಳಿದ ಸಾಕ್ಷಿದಾರರುಗಳನ್ನು ವಿಚಾರಣೆ ಮಾಡುವುದರಿಂದ ಯಾವುದೇ ಪ್ರಯೋಜನವಾಗುವುದಿಲ್ಲವೆಂದು ಈ ನ್ಯಾಯಾಲಯವು ಪರಿಗಣಿಸಿರುತ್ತದೆ.

16) ಆರೋಪಿತರ ಮೇಲೆ ಹೊರಿಸಿರುವಂತಹ ಅಪಾದನೆಯನ್ನು ಆರೋಪಿತರೆ ಮಾಡಿರುತ್ತಾರೆಂದು ಸಂಶಯಾತೀತವಾಗಿ ಸಾಭೀತುಪಡಿಸುವ ಹೊಣೆಯು ಅಭಿಯೋಜನೆಯ ಮೇಲಿದ್ದು, ಆದರೆ ಅಭಿಯೋಜನೆಯವರು ವಿಚಾರಣೆಗೆ ಒಳಪಡಿಸಿದಂತಹ ಸಾಕ್ಷಿದಾರರುಗಳು ಅಭಿಯೋಜನೆಯ ವಾದವನ್ನು ಬೆಂಬಲಿಸಿರುವುದಿಲ್ಲ ಮತ್ತು ಈ ಪ್ರಕರಣದ ಪ್ರಮುಖ ಸಾಕ್ಷಿಗಳಾದಂತಹ ಪಿರ್ಯಾದಿಯು ಆರೋಪಿತರ ವಿರುದ್ಧವಾಗಿ ಪ್ರಕರಣಕ್ಕೆ ಅನುಕೂಲವಾಗುವಂತೆ ಯಾವುದೇ ರೀತಿಯ ಸಾಕ್ಷ್ಯಗಳನ್ನು ನುಡಿದಿರುವುದಿಲ್ಲ. ಈ ಪ್ರಕರಣದಲ್ಲಿ ಸ್ವತಃ ಪಿರ್ಯಾದಿ ಹಾಗೂ ಸಾಕ್ಷಿದಾರರು ಪ್ರಕರಣಕ್ಕೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ.

ಆದ್ದರಿಂದ ಆರೋಪಿತರೆ ಸದರಿ ಆಪಾದಿಸಿರುವಂತಹ ಆರೋಪಗಳನ್ನು ಮಾಡಿರುತ್ತಾರೆಂದು ನಂಬಲು ಸಂಶಯ ಉಂಟಾಗಿರುವುದರಿಂದ, ಅನುಮಾನದ ಲಾಭವನ್ನು ಆರೋಪಿತರಿಗೆ ನೀಡುವುದು ಸೂಕ್ತವಾಗಿರುತ್ತದೆ. ಸ್ವತಃ ದೂರುದಾರರಿಗೆ ಪ್ರಕರಣವನ್ನು ಮುಂದುವರಿಸುವ ಇಚ್ಚೆ ಇಲ್ಲದಿರುವುದು ಕಂಡುಬರುತ್ತದೆ. ಪಕ್ಷಗಾರರು ತಾವು ಈಗ ಅನ್ಯೋನ್ಯಯವಾಗಿ ಇದ್ದೇವೆ ಎಂದು ನುಡಿದಿರುತ್ತಾರೆ. ಮೇಲಾಗಿ ಯಾವುದೇ ದೃಷ್ಟಿಯಿಂದ ನೋಡಿದರೂ ಸಹಿತ ಅಭಿಯೋಜನೆಯವರು ಆರೋಪಿತರ ಮೇಲೆ ಮಾಡಿದ ಆಪಾದನೆಯನ್ನು ಸಂಶಯಾತೀತವಾಗಿ ಸಾಭೀತುಪಡಿಸಲು ವಿಫಲವಾಗಿರುವುದರಿಂದ ಅನುಮಾನದ ಲಾಭವನ್ನು ಆರೋಪಿತರ ಪರವಾಗಿ ಕೊಟ್ಟು ಅಂಶ ಸಂಖ್ಯೆ 1 ರಿಂದ 6 ನ್ನು ಈ ನ್ಯಾಯಾಲಯ ನಕಾರಾತ್ಮಕವಾಗಿ ಉತ್ತರಿಸಿರುತ್ತದೆ.

17) ಅಂಶ ಸಂಖ್ಯೆ-7 - ಅಂಶ ಸಂಖ್ಯೆ-1 ರಿಂದ 6 ರಲ್ಲಿ ತೋರಿಸಿದ ಕಾರಣಗಳಿಂದಾಗಿ, ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

**ಆದೇಶ**

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿ ಆರೋಪಿ-1, 3 ರಿಂದ 6 ರವರನ್ನು ಭಾರತೀಯ ದಂಡ ಸಂಹಿತೆ ಕಲಂ.143, 147, 323, 324, 504, 506 (2) ಸಹವಾಚಕ 149 ರ ಅಡಿಯಲ್ಲಿನ ದೋಷಾರೋಪಣೆಗಳಿಗೆ ನಿರ್ದೋಷಿಗಳು ಎಂದು ತೀರ್ಮಾನಿಸಲಾಗಿರುತ್ತದೆ.

ಆರೋಪಿತರು ನೀಡಿದ ಇತರೆ ಜಾಮೀನು ಮತ್ತು ಅವರ ಜಾಮೀನುದಾರರ ಜಾಮೀನು ಪತ್ರ ರದ್ದಾಗತಕ್ಕದ್ದು.

ಈ ಪ್ರಕರಣದಲ್ಲಿ ಜಪ್ತಾದ 3 ಅಡಿ ಉದ್ದದ ಒಂದು ಕಟ್ಟಿಗೆ ಇದ್ದು, ಇದು ಬೆಲೆ ಬಾಳದ ವಸ್ತುವಾಗಿದ್ದರಿಂದ ಈ ಪ್ರಕರಣದ ಮೇಲ್ಮನವಿ ಅವಧಿ ಮುಗಿದ ನಂತರ ಅದನ್ನು ನಾಶಗೊಳಿಸಲು ಆದೇಶಿಸಲಾಗಿದೆ.

(ಈ ಮೇಲ್ಕಂಡ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಕಂಪ್ಯೂಟರ್ ನಲ್ಲಿ ನೀಡಿ, ನಂತರ ಓದಿ, ತಪ್ಪುಗಳನ್ನು ತಿದ್ದಿ ಚಿಕ್ಕ ರುಜುವಿನೊಂದಿಗೆ ಮುಕ್ತ ನ್ಯಾಯಾಲಯದಲ್ಲಿ ದಿನಾಂಕ 24 ನೇ ಜುಲೈ -2026 ರಂದು ಘೋಷಿಸಲ್ಪಟ್ಟಿತು).

**(ಅಶೋಕ ಆರ್. ಎಚ್.)**
ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ.ಸಿರುಗುಪ್ಪ

## ಅನುಬಂಧ

ಅಭಿಯೋಜಕರ ಪರವಾಗಿ ವಿಚಾರಿಸಲ್ಪಟ್ಟ ಸಾಕ್ಷಿದಾರರ ವಿವರ ಃ

ಪ್ರಾಸಾ-1 - ಶ್ರೀಮತಿ ನಾಗಮ್ಮ

ಪ್ರಾಸಾ-2 - ಜಡೆಯಪ್ಪ

ಪ್ರಾಸಾ-3 - ಶ್ರೀಮತಿ ಪಕ್ಕೀರಮ್ಮ

ಪ್ರಾಸಾ-4 - ಶ್ರೀಮತಿ ಈರಮ್ಮ

ಅಭಿಯೋಜಕರ ಪರವಾಗಿ ಗುರ್ತಿಸಲ್ಪಟ್ಟ ದಾಖಲಾತಿಗಳ ವಿವರ ಃ

ನಿಪಿ 1 - ಪಿರ್ಯಾದಿ

ನಿಪಿ 1 ಎ - ಪ್ರಾಸಾ-1 ರವರ ಸಹಿ

ನಿಪಿ 2 - ಕೃತ್ಯ ಸ್ಥಳ ಹಾಗೂ ಜಪ್ತು ಪಂಚನಾಮೆ

ನಿಪಿ 2 ಎ - ಪ್ರಾಸಾ-1 ರವರ ಸಹಿ

ನಿಪಿ 3 - ಕೃತ್ಯ ಸ್ಥಳದ ಕಚ್ಚಾ ನಕಾಶೆ

ನಿಪಿ 3 ಎ - ಪ್ರಾಸಾ-1 ರವರ ಸಹಿ

ನಿಪಿ 4 - ಕೃತ್ಯ ಸ್ಥಳದ ಭಾವ ಚಿತ್ರ

ನಿಪಿ 5 - ಪ್ರಾಸಾ2 ರವರ ಹೇಳಿಕೆ

ನಿಪಿ 6 - ಪ್ರಾಸಾ3 ರವರ ಹೇಳಿಕೆ

ನಿಪಿ 7 - ಪ್ರಾಸಾ4 ರವರ ಹೇಳಿಕೆ

ಅಭಿಯೋಜಕರ ಪರವಾಗಿ ಗುರ್ತಿಸಲ್ಪಟ್ಟ ಮುದ್ದೆ ಮಾಲುಗಳ ವಿವರ ಃ ಇಲ್ಲ

ಆರೋಪಿತರ ಪರವಾಗಿ ವಿಚಾರಿಸಲ್ಪಟ್ಟ ಸಾಕ್ಷಿದಾರರ ವಿವರ ಃ ಇಲ್ಲ

ಆರೋಪಿತರ ಪರವಾಗಿ ಗುರ್ತಿಸಲ್ಪಟ್ಟ ದಾಖಲಾತಿಗಳ ವಿವರ ಃ ಇಲ್ಲ

ಆರೋಪಿತರ ಪರವಾಗಿ ಗುರ್ತಿಸಲ್ಪಟ್ಟ ಮುದ್ದೆ ಮಾಲುಗಳ ವಿವರ ಃ ಇಲ್ಲ

**(ಅಶೋಕ ಆರ್. ಎಚ್.)**
ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ.ಸಿರುಗುಪ್ಪ